ದಿನಾಂಕ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ**

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನಮ್ಮ ಊರಿನಿಂದ ಬಸ್ಸಿನ ಮೂಲಕ ಬಂದಿರುತ್ತೇನೆ. ನನ್ನ ಅಕ್ಕ ನೀಲವ್ವ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನೀಲವ್ವ ಅವರಿಗೆ ಶಂಕ್ರವ್ವ, ಗಿರಿಜವ್ವ, ಕಮಲವ್ವ ಹಾಗೂ ಚನ್ನಪ್ಪ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಹೆಸರು ಶಂಕ್ರವ್ವ. ಶಂಕ್ರವ್ವ ನೀಲವ್ವನ ಮಗಳಾಗಿರುತ್ತಾಳೆ. 2 ನೇ ವಾದಿ ಆದ ಕಮಲವ್ವ ಅವರು ನನ್ನ ಹೆಂಡತಿಯ ತಂಗಿ ಅಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಹೆಸರು ಶಂಕ್ರವ್ವ ಅವರ ತಂಗಿಯಾದ ಕಮಲವ್ವ ಕೂಡಾ ನೀಲವ್ವನ ಮಗಳಾಗಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 1 ನೇ ವಾದಿಯಾದ ಯಲ್ಲಪ್ಪ ಕಮಲವ್ವ ಅವರ ಗಂಡ ಆಗಿರುತ್ತಾರೆ ಹಾಗೂ ಸಂಬಂಧದಲ್ಲಿ ಸಹೋದರ ಎಂದರೆ ಸರಿಯಲ್ಲ. ನನ್ನ ಊರಿನಲ್ಲಿ ಇರುವ ನನ್ನ ಆಸ್ತಿಯ ನಂಬರ 44 ಡಿ ಆಗಿರುತ್ತದೆ ಎಂದರೆ ನಾನು ಅದರ ಬಗ್ಗೆ ಬರೆದುಕೊಂಡು ಬಂದಿರುವುದಿಲ್ಲ. ಸಿದ್ದಪ್ಪ ರಾಮಪ್ಪ ನಿಂಬಣ್ಣನವರ ರವರ ಆಸ್ತಿಯ ನಂಬರ 44/ಎ ಅದರ ಪಕ್ಕದಲ್ಲಿ ಇದೆ ಎಂದರೆ ಸರಿ. ಆಸ್ತಿ ನಂಬರ 45 ಎ ಹಾಗೂ 45 ಎ 1 ಆಸ್ತಿಗಳು 1 ಮತ್ತು 2 ನೇ ವಾದಿಗಳ ಆಸ್ತಿಗಳು ಆಗಿರುತ್ತವೆ. ಇವುಗಳು ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವುಗಳು ಉತ್ತರ ದಿಕ್ಕಿನಲ್ಲಿ ಬರುತ್ತವೆ ಎನ್ನುತ್ತಾರೆ. ಆಸ್ತಿ ಸಂಃ45 ರ ಪೂರ್ವ ದಿಕ್ಕಿನಲ್ಲಿ ಪಕ್ಕೀರಪ್ಪ ಗಾಯಕವಾಡ, ನಕುಲಪ್ಪ ನಿಂಬಣ್ಣನವರ, ದುರುಗವ್ವ ಬೇವಿನಹಳ್ಳಿ, ಮೂಕಪ್ಪ ಹನಕನಹಳ್ಳಿ ಆಸ್ತಿಗಳು ಬರುತ್ತವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಸರಕಾರಿ ಡಾಂಬರ ರಸ್ತೆಯ ಉತ್ತರ ದಿಕ್ಕಿನಲ್ಲಿ ಬರುತ್ತವೆ ಎಂದರೆ ಸರಿ.

3. ಯಲ್ಲಪ್ಪ ಅವರು ಮೂಲತಃ ಹಾನಗಲ್ಲ ತಾಲೂಕ ಸಾವೀಕೇರಿ ಗ್ರಾಮದವರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಬಂದು ಸುಮಾರು 35 ವರ್ಷಗಳು ಆಗಿರುತ್ತವೆ ಎನ್ನುತ್ತಾರೆ. ಅವರಿಗೆ ಸದರಿ ಗ್ರಾಮದಲ್ಲಿ ಮನೆ, ಜಮೀನುಗಳು ಹಾಗೂ ತಂದೆ ಅಣ್ಣ ತಮ್ಮಂದಿರು ಕೂಡಾ ಇರುತ್ತಾರೆ. 1 ಮತ್ತು 2 ನೇ ವಾದಿಯರು ಸಾವೀಕೇರಿ ಗ್ರಾಮದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡಿಕೊಂಡು ಸುಮಾರು 7-8 ವರ್ಷಗಳಿಂದ ಇದ್ದಾರೆ ಎಂದರೆ ಅವರು ರಾಮಾಪುರ ಗ್ರಾಮದಲ್ಲಿ ಇದ್ದಾರೆ. ಅವರು ಸುಮಾರು 7-8 ವರ್ಷಗಳಿಂದ ಸಾವೀಕೇರಿ ಗ್ರಾಮದಲ್ಲಿ ವಾಸವಿದ್ದು, ಕೃಷಿ ಚಟುವಟಿಕೆಗಳನ್ನು ಮಾಡಿಕೊಂಡು ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಇತ್ತೀಚೆಗೆ 1 ಮತ್ತು 2 ನೇ ವಾದಿಗಳ ಮಗನಾದ ರಮೇಶ ಅವರು ಬಂಕಾಪುರ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಅವರ ಮಗಳಿಗೆ ಮಾಸನಕಟ್ಟಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಆದ್ದರಿಂದ 1 ಮತ್ತು 2 ನೇ ವಾದಿಗಳು ಮಾಸನಕಟ್ಟಿ ಗ್ರಾಮದಲ್ಲಿ ಕೆಲವು ವರ್ಷಗಳ ಕಾಲ ವಾಸವಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅವರು ರಾಮಾಪುರ ಗ್ರಾಮದಲ್ಲಿ ವಾಸವಿದ್ದಾರೆ ಎನ್ನುತ್ತಾರೆ. 1 ನೇ ವಾದಿಗೆ ವಯಸ್ಸಾಗಿದ್ದರಿಂದ ಅವರು ಕೃಷಿ ಚಟುವಟಿಕೆಗಳನ್ನು ಮಾಡುವುದಿಲ್ಲ. ಸಾಕ್ಷಿಯು ಮುಂದುವರೆದು 1 ನೇ ವಾದಿಯು ಒಂದು ದಿನ ಹೋಗುತ್ತಾರೆ ಇನ್ನೊಂದು ದಿನ ಕೃಷ್ಟಿ ಚಟುವಟಿಕೆಗಳಿಗೆ ಹೋಗುವುದಿಲ್ಲ ಎನ್ನುತ್ತಾರೆ.

5. 1 ನೇ ವಾದಿಗೆ ಎತ್ತುಗಳು ಇರುವುದಿಲ್ಲ. ಅವರಿಗೆ ಎತ್ತುಗಳು ಇಲ್ಲದೇ ಇರುವುದರಿಂದ ಅವರು ಯಾವುದೇ ಎತ್ತಿನ ಶೆಡ್ಡನ್ನು ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿ ಅಳತೆ ನನಗೆ ಗೊತ್ತು, ಉತ್ತರ - ದಕ್ಷಿಣ 113 ಅಡಿಗಳು, ಪೂರ್ವ - ಪಶ್ಚಿಮ 35 ಅಡಿಗಳು



ಆಗಿರುತ್ತದೆ. ನಾನು ವೈಯಕ್ತಿಕವಾಗಿ ಸದರಿ ಅಳತೆಯನ್ನು ಮಾಡಿರುತ್ತೇನೆ. ಸದರಿ ಸಮಯದಲ್ಲಿ ನಾನು, 1 ನೇ ವಾದಿ ಹಾಗೂ 2 ನೇ ವಾದಿಯವರು ಇದ್ದೆವು. ಸದರಿ ಅಳತೆಯನ್ನು

ಪಂಚಾಯಿತಿಯವರು ಮಾಡಿರುತ್ತಾರೆ. ಈ ರೀತಿ ಅಳತೆಯನ್ನು ಪಂಚಾಯಿತಿಯವರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಇರುವ ಸರಕಾರಿ ಪ್ರಾಥಮಿಕ ಶಾಲೆಯ ನಂಬರ ನನಗೆ ಗೊತ್ತಿಲ್ಲ. ಸದರಿ ಶಾಲೆಗೆ ಪಂಚಾಯಿತಿಯಲ್ಲಿ ಆಸ್ತಿ ಸಂಃ1 ಕೊಟ್ಟಿರುತ್ತಾರೆ ಎಂದರೆ ಸರಿ. ಅಲ್ಲಿ ಒಂದು ಅಂಗನವಾಡಿ ಕೂಡಾ ಇರುತ್ತದೆ. ಸದರಿ ಅಂಗನವಾಡಿ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ ಎಂದರೆ ಅದು ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಸದರಿ ಅಂಗನವಾಡಿಯ ಆಸ್ತಿ ಸಂಃ1/1 ಇದೆ ಎಂದರೆ ಸರಿ. ಅಂಗನವಾಡಿ ಆದ ನಂತರ ಆಸ್ತಿ ನಂಃ3 ಬರುತ್ತದೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು, ಅಂಗನವಾಡಿ ಆದ ನಂತರ ಕಾಂಪೌಂಡ್ ಆದ ನಂತರ 1 ಹಾಗೂ 2 ನೇ ವಾದಿಗಳ ಆಸ್ತಿ ಇರುತ್ತದೆ ಎನ್ನುತ್ತಾರೆ.

6. ನಮ್ಮ ಊರಿನಲ್ಲಿ ಹುಸೇನಸಾಬ ಹಸನಸಾಬ ದ್ಯಾಮನಕೊಪ್ಪ ಅವರು ಇದ್ದಾರೆ ಎಂದರೆ ಸರಿ. ಅವರ ಮನೆ 2 ನೇ ಪ್ರತಿವಾದಿಯಾದ ಗಂಗವ್ವ ಅವರ ಮನೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಊರಿಗೆ ಪ್ರವೇಶ ಮಾಡುತ್ತಿರುವ ಸರಕಾರಿ ಡಾಂಬರ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಬರುತ್ತವೆ ಎಂದರೆ ಸರಿ. ಆಸ್ತಿ ಸಂಃ 44 ರಿಂದ 47 ಸದರಿ ಡಾಂಬರ ರಸ್ತೆಯ ಉತ್ತರ ದಿಕ್ಕಿನಲ್ಲಿ ಬರುತ್ತವೆ ಎಂದರೆ ಹೌದು. ವಾದಿಗಳ ಆಸ್ತಿ ಸದರಿ ಡಾಂಬರ ರಸ್ತೆಯ ಉತ್ತರ ದಿಕ್ಕಿನಲ್ಲಿ ಇರುವುದರಿಂದ ಹಾಗೂ ಪ್ರತಿವಾದಿಗಳ ಆಸ್ತಿ ಸದರಿ ಡಾಂಬರ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಇರುವುದರಿಂದ ಜಗಳ ಅಥವಾ ತಂಟೆ ಉದ್ಭವ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ವಾದಿಯವರ ಅಕ್ಕನನ್ನು ಮದುವೆ ಆಗಿದ್ದರಿಂದ 2 ನೇ ವಾದಿಗೆ ಅನುಕೂಲ ಮಾಡಬೇಕು ಎಂಬ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ